### ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ | 12ನೇ ಪುಣ್ಯಸ್ಮರಣೆ ನಿಮಿತ್ತ ಸವಿ ನೆನಪು ಕಾರ್ಯಕ್ರಮ

# ರೈತ ಕಾಳಜಿ ಆಡಳಿತದ ದಾರಿದೀಪ ಎಸ್.ಬಂಗಾರಪ್ಪ

■ ವಿಜಯವಾಣಿ ಸುದ್ದಿಜಾಲ ಸೊರಬ

ಯಾವುದೇ ವ್ಯಕ್ತಿಯ ಹೆಜ್ಜೆ ಗುರುತುಗಳು ಮುಖ್ಯವಾಗಿದ್ದು, ಸತ್ತ ಮೇಲೂ ಜನಮಾನಸದಲ್ಲಿ ಬದುಕುವುದು ಅಷ್ಟು ಸುಲಭವಲ್ಲ. ಆದರೆ ಎಸ್.ಬಂಗಾರಪ್ಪ ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.



ಪಟ್ಟಣದ ಬಂಗಾರಧಾಮದಲ್ಲಿ ಎಸ್.ಬಂಗಾರಪ್ಪ ಫೌಂಡೇಶನ್ ಹಾಗೂ ಎಸ್.ಬಂಗಾರಪ್ಪ ವಿಚಾರ ವೇದಿಕೆಯಿಂದ ಎಸ್.ಬಂಗಾರಪ್ಪ 12ನೇ ಪುಣ್ಯಸ್ಮರಣೆ ನಿಮಿತ್ತ ಮಂಗಳವಾರ ಹಮ್ಮಿಕೊಂಡಿದ್ದ ಎಸ್.ಬಂಗಾರಪ್ಪ ಸವಿ ನೆನಪು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಡವರು, ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಆಡಳಿತ ಎಂದೆಂದಿಗೂ ಜೀವಂತ. ನಮಗೆ ದಾರಿ ತೋರಿಸಿದ ಕೆಲವರಲ್ಲಿ ಬಂಗಾರಪ್ಪ ಕೂಡ ಒಬ್ಬರಾಗಿದ್ದಾರೆ. ಕೃಷಿ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಿ ರೈತ ವರ್ಗದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಮಧು ಬಂಗಾರಪ್ಪ ತಂದೆ-ತಾಯಿ ಬಗ್ಗೆ ಅಪಾರ ಕಾಳಜಿ ಹೊಂದಿದ್ದು, ಸಮಾಧಿ ಸ್ಥಳವನ್ನು ಭವ್ಯ ಬಂಗಾರಧಾಮವಾಗಿ ನಿರ್ಮಿಸಿದ್ದು ಮೆಚ್ಚುವಂಥದ್ದು ಎಂದರು. ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಮಂತ್ರಿಗಳಾಗುವುದು ಸರಳ. ಆದರೆ ಜನನಾಯಕರಾಗುವುದು ಕಷ್ಟ. ಹೀಗಿರುವಾಗ ಎಸ್.ಬಂಗಾರಪ್ಪ ದೊಡ್ಡ ಜನನಾಯಕರಾಗಿದ್ದರು. ಗೇಣಿದಾರರ ಹೋರಾಟಕ್ಕೆ ಸ್ಪಂದನೆ ನೀಡಿದ ಬಂಗಾರಪ್ಪ ಅವರು ಎತ್ತರಕ್ಕೆ ಬೆಳೆದಿದ್ದರು. ಬಡವರನ್ನು ಮುನ್ನೆಲೆಯಲ್ಲಿ ಇಟ್ಟುಕೊಂಡು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಜನಮಾನಸದಲ್ಲಿ ನೆಲೆಸಿದ್ದಾರೆ ಎಂದರು.

ಮಾಜಿ ಸಚಿವ ಅರವಿಂದ್ ಲಿಂಬಾವಳಿ ಮಾತನಾಡಿ, ಎಸ್.ಬಂಗಾರಪ್ಪ ಅವರು ಬಿಜೆಪಿಗೆ ಬಂದಾಗ ಅವರ ಜತೆ ಕೆಲಸ ಮಾಡಲು ಅವಕಾಶ ಸಿಕ್ಕಿದ್ದಲ್ಲದೆ ಅವರಿಗೆ ಅತ್ಯಂತ ಹತ್ತಿರದಲ್ಲಿದ್ದೆ. ಸ್ವಾಭಿಮಾನಕ್ಕೆ ಬಂಗಾರಪ್ಪ ಬದ್ಧರಾಗಿದ್ದರು. ಅದಕ್ಕೆ ಧಕ್ಕೆ ಬಂದಾಗ ಆ ಸ್ಥಳದಲ್ಲಿ ಇರುತ್ತಿರಲಿಲ್ಲ. ಎಸ್.ಬಂಗಾರಪ್ಪ ಸಮಾಧಿ ಸ್ಥಳದಲ್ಲಿ ಮಧು ಬಂಗಾರಪ್ಪ ಸ್ವಂತ ಬಲದಿಂದ ಬಂಗಾರಧಾಮ ನಿರ್ಮಿಸಿದ್ದಾರೆ. ಶಿವಮೊಗ್ಗ ರಸ್ತೆಯ ಎಡ-ಬಲ ಜಾಗಗಳನ್ನು ಗಮನಿಸಿ ಮಧು ಬಂಗಾರಪ್ಪ ಅವರ ಸಮಾಜಮುಖಿ ಗುಣ ಅರಿಯಬೇಕಿದೆ ಎಂದರು. ಸಚಿವ ಎಸ್.ಮಧು ಬಂಗಾರಪ್ಪ ಪ್ರಾಸ್ತಾವಿಕ ಮಾತನಾಡಿ, ನನ್ನ ತಂದೆ-ತಾಯಿ ಹೊಟ್ಟೆಯಲ್ಲಿ ಹುಟ್ಟಿದಕ್ಕೆ ಧನ್ಯನಾಗಿದ್ದೇನೆ. ಎಸ್.ಬಂಗಾರಪ್ಪ ಸಮಾಧಿ ಸ್ಥಳ ಜನರಿಗೆ ಮುಕ್ತವಾಗಿರುತ್ತದೆ. ಉಚಿತವಾಗಿ ಎಲ್ಲರೂ ಬಳಸಿಕೊಳ್ಳಬಹುದು. ಅವರ ಹೆಸರನ್ನು ಉಳಿಸಿಕೊಂಡು ಹೋಗುವ ಕೆಲಸ ನಿರಂತರ ಮಾಡುತ್ತೇನೆ ಎಂದರು.



ಸೊರಬ ಬಂಗಾರ ಧಾಮದಲ್ಲಿ ಹಮ್ಮಿಕೊಂಡಿದ್ದ 'ಎಸ್.ಬಂಗಾರಪ್ಪ ಸವಿ ನೆನಪು' ಕಾರ್ಯಕ್ರಮವನ್ನು ಸಭಾಪತಿ ಬಸವರಾಜ ಹೊರಟ್ಟಿ ಗಿಡಕ್ಕೆ ನೀರೆರೆದು ಉದ್ಘಾಟಿಸಿದರು. ಎಚ್.ಕೆ.ಪಾಟೀಲ್, ಮಧು ಬಂಗಾರಪ್ಪ, ಭೀಮಣ್ಣ ನಾಯ್ಕ್, ಅರವಿಂದ ಲಿಂಬಾವಳಿ ಇತರರಿದ್ದರು.

## ಬಂಗಾರಧಾಮಕ್ಕೆ ಪೂಜೆ

ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ 12ನೇ ಪುಣ್ಯಸ್ಮರಣೆ ಅಂಗವಾಗಿ ಸೊರಬ ಬಂಗಾರಧಾಮದಲ್ಲಿರುವ ಸಮಾಧಿಗೆ ಸಚಿವ ಮಧು ಬಂಗಾರಪ್ಪ ಕುಟುಂಬ ಸಮೇತರಾಗಿ ಆಗಮಿಸಿ ಪೂಜೆ ಸಲ್ಲಿಸಿದರು. ಜಡೆ ಸಂಸ್ಥಾನ ಮಠದ ಡಾ. ಶ್ರೀ ಮಹಾಂತ ಸ್ವಾಮೀಜಿ, ಪಕ್ಷದ ಮುಖಂಡರು ಉಪಸ್ಥಿತರಿದ್ದರು. ಸುದ್ದಿಗಾರರ ಜತೆ ಮಾತನಾಡಿದ ಮಧು ಬಂಗಾರಪ್ಪ, ಎಸ್.ಬಂಗಾರಪ್ಪ ಅವರು ತಮ್ಮ ಅಧಿಕಾರಾವಧಿಯಲ್ಲಿ ಬಡವರು, ಹಿಂದುಳಿದವರು, ರೈತಪರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದರು. ಅವು ಇಂದಿಗೂ ಜನಮಾನಸದಲ್ಲಿ ಉಳಿದಿವೆ. ತಂದೆಯಂತೆಯೇ ವಿನೂತನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನದಲ್ಲಿದ್ದೇನೆ. ಶಿಕ್ಷಣ ಸಚಿವನಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸುವೆ ಎಂದು ತಿಳಿಸಿದರು.

ಬಂಗಾರಪ್ಪನವರ 12ನೇ ಪುಣ್ಯಸ್ಮರಣೆ | ಕೆಳವರ್ಗದ ಜನರ ಆಶೋತ್ತರಕ್ಕೆ ಸ್ಪಂದನೆ

# ಗೇಣಿದಾರರ ಪರ ಹೋರಾಟ ಬಂಗಾರಪ್ಪ ಸೇವೆ ಸ್ಮರಣೀಯ

**ಸೊರಬ:** ಒಬ್ಬ ನಾಯಕ ಎಷ್ಟು ಕಾಲ ಇರುತ್ತಾನೆ ಎಂಬುವುದು ಮುಖ್ಯವಲ್ಲ, ಅವರು ಸಮಾಜದಲ್ಲಿ ಎಂತಹ ಪ್ರಭಾವ ಬೀರುತ್ತಾರೆ ಎಂಬುದು ಮುಖ್ಯ ಎಂದು ಕಾನೂನು; ಸಂಸದೀಯ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ್ ಹೇಳಿದರು.

ಪಟ್ಟಣದ ಬಂಗಾರ ಧಾಮದಲ್ಲಿ ಬಂಗಾರಪ್ಪ ವಿಚಾರ ವೇದಿಕೆ, ಬಂಗಾರಪ್ಪ ಅಭಿಮಾನಿ ಬಳಗ ಹಾಗೂ ಬಂಗಾರಪ್ಪ ಫೌಂಡೇಷನ್ ವತಿಯಿಂದ ಮಾಜಿ ಮುಖ್ಯಮಂತ್ರಿ ದಿ.ಎಸ್. ಬಂಗಾರಪ್ಪನವರ 12ನೇ ಪುಣ್ಯಸ್ಮರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ಎಸ್. ಬಂಗಾರಪ್ಪ ಸವಿನೆನಪು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಸ್. ಬಂಗಾರಪ್ಪನವರು ಸಮಾಜವಾದಿಯಾಗಿದ್ದರಿಂದಲೇ ಅವರಿಗೆ ರಾಜಕೀಯವಾಗಿ ಉನ್ನತ ಸ್ಥಾನಮಾನ ದೊರಕಲು ಸಾಧ್ಯವಾಯಿತು. ಅವರು ಎಂತಹ ಪವರ್‌ಫುಲ್ ನಾಯಕರು ಎಂಬುದಕ್ಕೆ ಅವರ ಬಗ್ಗೆ ಬಿಜಾಪುರ, ಬೀದರ್‌ನಲ್ಲಿ ಘೋಷಣೆಗಳು ಮೊಳಗುತ್ತವೆ. ಉಳುವವನೆ ಹೊಲದೊಡೆಯ, ಗೇಣಿದಾರರ ಪರ ಮಾಡಿದ ಹೋರಾಟ ರಾಜ್ಯದ ಜನತೆಯ ಹೃದಯದಲ್ಲಿ ಇಂದಿಗೂ ಛಾಪಿಸಿದೆ. ಮುಖ್ಯಮಂತ್ರಿಯಾಗಿದ್ದಾಗ ಅಕ್ಷಯ, ಆರಾಧನ, ವಿಶ್ವ, ಶುಶ್ರೂಷ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಬಡವರು, ಹಿಂದುಳಿದವರು ಮುಂದೆ ಬರಲು ಕಾರಣಕರ್ತರಾಗಿದ್ದಾರೆ. ಹಾಸ್ಯ, ವರ್ಣಮಯ ವ್ಯಕ್ತಿತ್ವದ ಎಸ್. ಬಂಗಾರಪ್ಪನವರಿಗೆ ಬಡವರ ಪರ ಅತ್ಯಂತ ಕಾಳಜಿಯಿತ್ತು. ಅವರು ಭಾಷಣದಿಂದಲೇ ಉತ್ತಮ ಜನನಾಯಕರಾಗಿದ್ದರು ಎಂದು ಸ್ಮರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಮಾತನಾಡಿ, ಬಂಗಾರಪ್ಪನವರ ಆದರ್ಶವಾದ ಚಿಂತನೆಗಳು ಎಂದಿಗೂ ಜೀವಂತವಾಗಿರುತ್ತವೆ ಅವರ ಒಡನಾಟ, ಮಾರ್ಗದರ್ಶನ ನಮಗೆ ಆದರ್ಶಪ್ರಾಯವಾದುದು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಇಂದು ನಡೆಯುತ್ತಿದ್ದೇವೆ ಎಂದರು.



ಸೊರಬದ ಬಂಗಾರ ಧಾಮದಲ್ಲಿ ಏರ್ಪಡಿಸಿದ್ದ ಮಾಜಿ ಸಿಎಂ 'ಎಸ್.ಬಂಗಾರಪ್ಪ ಸವಿನೆನಪು' ಕಾರ್ಯಕ್ರಮವನ್ನು ಸಚಿವ ಎಚ್.ಕೆ.ಪಾಟೀಲ ಉದ್ಘಾಟಿಸಿದರು. ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ಸಚಿವ ಮಧು ಬಂಗಾರಪ್ಪ, ಮಾಜಿ ಸಚಿವ ಅರವಿಂದ ಲಿಂಬಾವಳಿ ಇದ್ದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ಬಂಗಾರಪ್ಪ ಅವರು ಯಾವಾಗಲೂ ಜನರ ಮಧ್ಯೆ ಇರುವ ನಾಯಕರಾಗಿದ್ದರು, ಜನರ ಭಾವನೆಗಳಿಗೆ ವಿಶೇಷವಾಗಿ ಕೆಳವರ್ಗದ ಜನರ ಆಶೋತ್ತರಗಳಿಗೆ ಸ್ಪಂದಿಸುವ ಗುಣ ಹೊಂದಿದ್ದರು ಎಂದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಬಂಗಾರಪ್ಪನವರ ಚಿಂತನೆ ವಿಚಾರಗಳು ನಾಡಿನ ಜನತೆಗೆ ತಲುಪಬೇಕು. ಈ ಧಾಮವು ಸ್ಫೂರ್ತಿಯ ನೆಲೆಯಾಗಬೇಕು. ಅವರ ಹೆಸರನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವ ಕಾರ್ಯ ಮಾಡುತ್ತೇನೆ. ಬಂಗಾರಪ್ಪನವರ ಚಿಂತನೆ ಒಂದು ಅಧ್ಯಯನ ಪೀಠವಾಗಬೇಕು ಎಂದರು.

ಶಿರಸಿ ಶಾಸಕ ಭೀಮಣ್ಣ ನಾಯ್ಕ್, ಮಾಜಿ ಶಾಸಕ ಆರ್ ಪ್ರಸನ್ನ ಕುಮಾರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ.ಮಂಜುನಾಥಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸುಂದರೇಶ್ ಮೊದಲಾದವರಿದ್ದರು. ಉಪನ್ಯಾಸಕಿ ಪವಿತ್ರ ನಿರೂಪಿಸಿದರು.